**ಸಾಕ್ಷಿಯನ್ನು ದಿಃ10.10.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ನಾನು 8 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.
2. ವಾದಿ ಜಮೀನು ಬರಬೇಕು ಎಂದು ಈ ದಾವೆ ಹಾಕಿದ್ದಾರೆ.
3. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಗೊತ್ತು.
4. ನಿಮ್ಮ ಪ್ರಮಾಣ ಪತ್ರದಲ್ಲಿ ಸ.ನಂ.27 ನ್ನು ಕಾಳೇಗೌಡ ಮತ್ತು ನಿಂಗೇಗೌಡರಿಂದ ಖರೀದಿ ಮಾಡಿರುವುದಾಗಿ ಬರೆಸಿದ್ದೀರಾ ಎಂದರೆ, ಸ.ನಂ.27 ಮತ್ತು 19 ಎರಡನ್ನೂ ಸಹ ಖರೀದಿ ಮಾಡಿರುವುದಾಗಿ ಬರೆಸಿದ್ದೇವೆ.
5. ಸ.ನಂ.19 ನ್ನು ದಿಃ 22.02.1980 ರಲ್ಲಿ ಖರೀದಿ ಮಾಡಿದ್ದೇವೆ. ಸದರಿ ಕ್ರಯಪತ್ರ ಹಾಜರುಪಡಿಸಿದ್ದೇನೆ.
6. ಸ.ನಂ.27 ರ 16 ಗುಂಟೆಯ ಪೂರ್ವಕ್ಕೆಃ ಹಾಸನ ಪಿರಿಯಾಪಟ್ಟಣ ರಸ್ತೆ, ಪಶ್ಚಿಮಕ್ಕೆ ನನ್ನ ಜಮೀನು. ಉತ್ತರಕ್ಕೆ ರಾಜು ಮಾಸ್ಟರ್ ಜಮೀನು, ದಕ್ಷಿಣಕ್ಕೆಃ ಬಿ.ಪಿ.ಸಿದ್ದಲಿಂಗಪ್ಪ ನವರ ಜಮೀನು. ಸದರಿ 16 ಗುಂಟೆಯನ್ನು ಕಾಳೇಗೌಡ ಮತ್ತು ನಿಂಗೇಗೌಡರ ಮಗ ಚಿಕ್ಕೇಗೌಡರಿಂದ ಖರೀದಿ ಮಾಡಿದ್ದೇನೆ.
7. ಸ.ನಂ.19 ನ್ನು ಸಹ ಅದೇ ಕಾಳೇಗೌಡ ಮತ್ತು ನಿಂಗೇಗೌಡರ ಮಗ ಚಿಕ್ಕೇಗೌಡರಿಂದ ಖರೀದಿ ಮಾಡಿದ್ದೇನೆ.
8. ಸ.ನಂ.27 ರ 21 ಗುಂಟೆಯ ಪೂರ್ವಕ್ಕೆಃ ಪಿರಿಯಾಪಟ್ಟಣ-ಬೆಟ್ಟದಪುರ ರಸ್ತೆ, ಪಶ್ಚಿಮಕ್ಕೆ ನನ್ನ ಜಮೀನು. ಉತ್ತರಕ್ಕೆ ರಾಜು ಮಾಸ್ಟರ್ ಜಮೀನು, ದಕ್ಷಿಣಕ್ಕೆಃ ಬಿ.ಪಿ.ಸಿದ್ದಲಿಂಗಪ್ಪ ನವರ ಜಮೀನು. ಸದರಿ 16 ಗುಂಟೆಯನ್ನು ಕಾಳೇಗೌಡ ಮತ್ತು ನಿಂಗೇಗೌಡರ ಮಗ ಚಿಕ್ಕೇಗೌಡರಿಂದ ಖರೀದಿ ಮಾಡಿದ್ದೇನೆ.
9. ಸ.ನಂ.19 ರ ಸಂಬಂಧ ಖರೀದಿ ಪತ್ರದ ಪ್ರಕಾರ ನನ್ನ ಹೆಸರಿಗೆ ಖಾತೆ ವರ್ಗಾವಣೆಯಾದ ಬಗ್ಗೆ ಎಂ.ಆರ್. ಹಾಗೂ ಪಹಣಿ ಹಾಜರುಪಡಿಸಿದ್ದೇನೆ. ನೀವು ಆ ರೀತಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.
10. ಸ.ನಂ.19 ರಲ್ಲಿ 21 ಗುಂಟೆ ಜಾಗವನ್ನು ವಾದಿಗಳಾಗಲಿ ಅಥವಾ ಅವರ ತಂದೆ ನಿಮಗೆ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ.

11. ನೀವು ದಾವಾ ಸ್ವತ್ತಿನ ಸಂಬಂಧ ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿದ್ದೇನೆ ಎಂದರೆ ಸರಿಯಲ್ಲ.

12. ದಾವಾ ಸ್ವತ್ತಿನ ಅಕ್ಕಪಕ್ಕ ನನ್ನ ಜಮೀನುಗಳು ಇವೆ.

13. ವಾದಿಗಳ ತಂದೆ ಹಾಗೂ ವಾದಿಗಳು ಮೂಲತಃ ಕಗ್ಗುಂಡಿ ಗ್ರಾಮದವರು ಎಂದರೆ ಸರಿ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ